ತಿಳಿಸಿದ್ದು ಗೊತ್ತಾದರೆ ನಾನು ತಲೆದಂಡ ಕೊಡಬೇಕಾಗುತ್ತೆ' ಅಸ್ಪಷ್ಟವಿತ್ತು ಅವನ ಮಾತು. ಒಟ್ಟಾರೆ ಕಾಕುಟ್ಟ ಜಟಿಲವಾದ ಸಮಸ್ಯೆಯಲ್ಲಿ ಬಿದ್ದಿದ್ದಾನೆನ್ನುವುದು ಕಿರಣನಿಗೆ ಸ್ಪಷ್ಟವಾಯಿತು.

'ಸರಿ, ನೀವು ಹೇಳುವುದಾದರೆ ಹೇಳಿ. ಇಲ್ಲದಿದ್ದರೆ ನಾನೇ ಅವರನ್ನು ವಿಚಾರಿಸಿಕೊಳ್ಳುತ್ತೇನೆ' ಕಿರಣ ಎದ್ದು ನಿಂತ.

'ಬೇಡ, ಕುಳಿತಿರಿ. ನಾನು ಹೇಳ್ತೀನಿ. ಒಂದು ವಾರದ ಹಿಂದೆ ನಮ್ಮ ಮಾಲೀಕ ಒಬ್ಬ ವ್ಯಕ್ತಿಯನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ರು. ಅವನನ್ನು ಅವರ ದೂರದ ಸಂಬಂಧೀಂತ ಪರಿಚಯಿಸಿದ್ರು. ಆ ವ್ಯಕ್ತಿ ಅರೆ ಪ್ರಜ್ಞಾವಸ್ಥೆಯಲ್ಲಿದ್ದ' ವ್ಯಕ್ತಿ ಕಿರಣನ ಮುಖವನ್ನೇ ಪರೀಕ್ಷಿಸುವಂತೆ ನೋಡಿದ. ಕಿರಣನಿಗೆ ಅವನ ವರ್ತನೆ ವಿಚಿತ್ರವಾಗಿ ಕಂಡಿತು.

ಆ ವ್ಯಕ್ತಿಯೇ ಮುಂದುವರಿಸಿದ.

'ನೋಡೋದಿಕ್ಕೆ ಅವನು ನಿಮ್ಮ ತರಾನೆ ಇದ್ದ'

ಅವನ ಮಾತು ಕೇಳಿ ಕಿರಣನಿಗೆ ಆಶ್ಚರ್ಯವಾಯಿತು. ತನ್ನನ್ನೇ ಹೋಲುವ ವ್ಯಕ್ತಿ! ಆಲೆಮನೆಯ ಬಳಿ ಏಟು ತಿಂದು ಬಿದ್ದಿದ್ದಾತ. ಮೇನಕಾ, ರಾಮಸ್ವಾಮಿಯೂ ಹೇಳಿದ್ದು ಅವನನ್ನೇ!?

ಕಿರಣ ಗೊಂದಲಕ್ಕೆ ಬಿದ್ದ! ಕಿರಣನ ಪ್ರತಿಕ್ರಿಯೆಗೆ ಕಾಯದ ಆ ವ್ಯಕ್ತಿ ಮಾತು ಮುಂದುವರೆಸಿದ.' ಈಗ ಅವನನ್ನು ಕರೆದುಕೊಂಡು ಹೈದರಾಬಾದ್ಗೆ ಹೋಗಿದ್ದಾರೆ'. ಕಿರಣ ನಿಟ್ಟುಸಿರಿಟ್ಟ.

* * *

ಗಾಳಿ ಮರದ ತೋಪುಗಳ ನೆರಳಿನಲ್ಲಿ ಕಿರಣನ ಜೊತೆಗೆ ಹೆಜ್ಜೆ ಹಾಕುತ್ತಿದ್ದ ಮೇನಕಾ ಅವನ ತೋಳನ್ನು ಹಿಡಿದು ನಿಲ್ಲಿಸಿದಳು. ಕಿರಣ ನಿಂತವನೇ ಅವಳತ್ತ ನೋಡಿದ. `ಬಂಡೆ'ಯ ಗಲ್ಲೆಯಲ್ಲಿದ್ದ ವ್ಯಕ್ತಿ ಹೇಳಿದ ಮಾತುಗಳಿನ್ನೂ ಅವನ ತಲೆಯನ್ನು ಕೊರೆಯುತ್ತಿದ್ದವು. ಅರೆಪ್ರಜ್ಞಾವಸ್ಥೆಯಲ್ಲಿದ್ದ ತನ್ನನ್ನೇ ಹೋಲುವ ವ್ಯಕ್ತಿ ಯಾರು? ಅವನ ಮೇಲೆ ಕಾಕುಟ್ಟ ದ್ವೇಷ ಸಾಧಿಸುತ್ತಿರುವುದೇಕೆ?

'ಕಿರಣ, ಹಾಗಾದರೆ ನಾವು ಪೊಲೀಸರನು ಭೇಟಿಯಾಗಿ ವಿಷಯ ತಿಳಿಸುವುದು ಒಳಿತೆನಿಸುತ್ತೆ' ಕಿರಣನಿಂದ ವಿಷಯವನ್ನು ತಿಳಿದುಕೊಂಡ ಮೇನಕಾಳಿಗೂ ನೆಮ್ಮದಿ ಸಂಪೂರ್ಣ ಕೆಟ್ಟು ಹೋಯಿತು.

ಕಿರಣ ಕ್ಷಣ ಹೊತ್ತು ಆಲೋಚಿಸಿದ.

'ಖಂಡಿತವಾಗಿಯೂ ಪೊಲೀಸರಿಗೆ ತಿಳಿಸಲೇಬೇಕು. ಇದರಿಂದ ಅಪಾಯ ತಪ್ಪಿದ್ದಲ್ಲ. ನನ್ನನ್ನೇ ಹೋಲುವ ವ್ಯಕ್ತಿ ಯಾರು? ಕಾಕುಟ್ಟನ ದೂರದೂರಿನ ಪಯಣ ಜೊತೆಗೆ ಅವನಿಂದ ಅಪಾಯಕ್ಕೆ ಸಿಲುಕಿದ ನನ್ನಂತೆ ಕಾಣುವ ವ್ಯಕ್ತಿ. ಇದರಿಂದ ನಮಗೂ ಅಪಾಯ ತಪ್ಪಿದಲ್ಲ'

'ಅದಕ್ಕೆ ಏನ್ಮಾಡ್ಬೇಕೂಂತೀಯಾ?' ಆತಂಕವಿತ್ತು ಮೇನಕಾಳ ಮಾತಿನಲ್ಲಿ.

'ಪೊಲೀಸರಿಗೆ ವಿಷಯ ತಿಳಿಸುವ ಮೊದಲು ಕಾಶಮ್ಮನನ್ನು ಹುಡುಕಬೇಕು. ಆನಂತರ ನಿನ್ನ ಡ್ಯಾಡೀನ ಸಂಪರ್ಕಿಸಿ ಅವರು ಎಲ್ಲಿದ್ದಾರೆನ್ನುವುದನ್ನು ತಿಳಿದುಕೊಳ್ಳಬೇಕು'

ಮೇನಕಾಳ ತಲೆ ಗಿರ್ರನೆ ತಿರುಗಿತು. ಇದೆಲ್ಲಾ ಸಾಧ್ಯವಿಲ್ಲದ ಮಾತು. ತನ್ನ ಚಿಕ್ಕಮ್ಮ ಅಂದರೆ ಕಾಶಮ್ಮ ಯಾವತ್ತೂ ಮನೆ ಬಿಟ್ಟು ಹೋಗದ ಹೆಂಗಸು ಎಲ್ಲೂ ದೂರ ಹೋಗುವ ಸಾಧ್ಯತೆ ಇಲ್ಲ. ಕಾಕುಟ್ಟನೇ ಆಕೆಯನ್ನು ಎಲ್ಲಿಗೋ ಬರಲು ಹೇಳಿದ್ದಾನೆ.

'ಹೌದು, ಚಿಕ್ಕಮ್ಮ ಎಲ್ಲೂ ದೂರ ಹೋಗುವ ಸಾಧ್ಯತೆ ಇಲ್ಲ. ಆಕೆಯನ್ನು ಕಾಕುಟ್ಟನೇ ಕರೆದುಕೊಂಡು ಬಂದಿದ್ದಾನೆ ಅನ್ಸುತ್ತೆ'

ಕಿರಣ ಕೂಡ ಅದೇ ರೀತಿ ತಿಳಿದುಕೊಂಡಿದ್ದ. ಆದರೆ ಇಲ್ಲಿಗೆ ಬಂದರೆ ಕಾಕುಟ್ಟನೇ ಮಾಯ!

'ಆದರೆ ಕಾಕುಟ್ಟನೇ ಕಾಣ್ತಿಲ್ಲ. ಗಲ್ಲೆಯ ವ್ಯಕ್ತಿ ಹೇಳುವಂತೆ ಅವನು ಹೈದರಾಬಾದ್ಗೆ ಹೋಗಿದ್ದಾನೆ. ನನಗನ್ನುತ್ತೆ ಆತ ನಿನ್ನ ಡ್ಯಾಡಿಯನ್ನು ಹಿಂಬಾಲಿಸಿಕೊಂಡು ಹೋಗಿರಬಹುದು'

ಕಿರಣನ ಅನುಮಾನಕ್ಕೆ ಮೇನಕಾಳ ಮುಖದಲ್ಲಿ ಗೊಂದಲವೇರ್ಪಟ್ಟಿತು. ಅವಳಿಗೂ ತನ್ನ ತಂದೆಯ ಮೇಲೆ ಅನುಮಾನ ಕಾಡಿತು. ಯಾವತ್ತೂ ಮನೆಯಿಂದ ಹೊರಗೆ ಉಳಿಯಬೇಕಾದ ಸಂದರ್ಭಗಳಲ್ಲಿ ತನಗೆ ತಿಳಿಸದೆ ಇರಲಾರರು. ಆದರೆ ಈಗ ಮತ್ತೆ ಅವರು ಹೊರಟಿರುವುದು ಎಲ್ಲಿಗೆ? ಅವರಿಗೆ ಕರೆ ಮಾಡಿ ತಿಳಿದುಕೊಳ್ಳಬೇಕೆಂದುಕೊಂಡಳು. ಆದರೆ ಅಪಾಯ ಬೆನ್ನಟ್ಟಿ ಕೊಂಡು ಬರುವಂತೆ ಕಂಡಿತು. ಕಿರಣ ಪಕ್ಕದಲ್ಲಿಯೇ ಇರುವುದರಿಂದ ಭಂಡ ಧೈರ್ಯ ತನಗೆ.

ಕಿರಣ ಮೇನಕಾಳ ಜೊತೆಗೆ ಮರಳು ದಿಣ್ಣೆಯ ಅಂಚಿಗಿದ್ದ ಕಲ್ಲಿನ ರಾಶಿಯತ್ತ ಹೆಜ್ಜೆ ಹಾಕಿದ. ನೀಲ ಜಲರಾಶಿಯ ಅನನ್ಯ ತೆರೆಗಳ ಆಟವನ್ನು ದಿಟ್ಟಿಸುತ್ತಿರು ವಂತೆ ಮೆದುಳು ಸಾಣೆ ಹಿಡಿದಂತೆ ಸಾಧ್ಯತೆಗಳನ್ನು ಲೆಕ್ಕ ಹಾಕುತ್ತಿತ್ತು. ಪಕ್ಕದಲ್ಲಿಯೇ ಕುಳಿತ ಮೇನಕಾ ಅವನ ಯೋಚನಾಲಹರಿಗೆ ಅಡ್ಡಿಪಡಿಸದೆ ಹೆದ್ದೆರೆಗಳನ್ನು ನೋಡುತ್ತಾ ಕುಳಿತಳು. ಗೊಂದಲ, ಸಂಕೀರ್ಣ ಸಾಧ್ಯತೆಗಳು ಅವಳ ಆಲೋಚನೆಯನ್ನೇ ನಿಷ್ಕ್ರಿಯಗೊಳಿಸಿದಂತಿದ್ದವು.

ಆಲೋಚನೆಯಲ್ಲಿಯೇ ಮುಳುಗಿದ್ದ ಇಬ್ಬರಿಗೂ ಸೂರ್ಯನ ಏರು ಬಿಸಿಲು ಕಣ್ಣಿಗೆ ರಾಚುತ್ತಿದ್ದದೂ ಅರಿವಾಗಲಿಲ್ಲ. ಸಮುದ್ರದ ಮೊರೆತದ ಜೊತೆಗೆ ಗಾಳಿಮರದ ತೋಪಿನ ಮೂಲಕ ಹಾದು ಬರುತ್ತಿದ್ದ ಗಾಳಿಯ ಸದ್ದು ಸುತ್ತೆಲ್ಲಾ ನಿರ್ಲಿಪ್ತತೆಯನ್ನು ನಿರ್ಮಿಸಿದ್ದವು.

'ಅರೆ! ನೀವಿಲ್ಲಿ? ಇದು ಕನಸು ಕಟ್ಟಿಕೊಳ್ಳುವುದಕ್ಕೆ ಯೋಗ್ಯವಾದ ತಾಣವಲ್ಲ. ಈ ಮರಳು ದಿಣ್ಣೆ ಅಪಾಯದ ಸ್ಥಳ' ಎದುರಿಗೆ ನಿಂತಿದ್ದ ವ್ಯಕ್ತಿಯ ಮಾತುಗಳಿಗೆ ದಿಗ್ಗನೆ ಎದ್ದು ನಿಂತಿದ್ದರು ಇಬ್ಬರೂ.

ಆ ವ್ಯಕ್ತಿಯ ಅನಿರೀಕ್ಷಿತ ಆಗಮನದಿಂದ ನಾಚಿಕೆಯೆನಿಸಿತು.

'ಹಗಲುಗನಸು' ವ್ಯಕ್ತಿ ಕುಹಕವಾಡಿದ.

ಕೃತಕ ನಗು ಇಬ್ಬರ ಮುಖದಲ್ಲೂ ಮೂಡಿ ಮರೆಯಾಯಿತು.

'ಕ್ಷಮಿಸಿ, ಅಲೆಗಳನ್ನು ನೋಡ್ತಾ ನೀವು ಬಂದಿರುವುದನ್ನು ಕೂಡ ಗಮನಿಸ್ಲಿಲ್ಲ ನಾವು' ಕ್ಷಮಾಪಣೆ ಕೇಳಿಕೊಂಡ ಕಿರಣ ತಪ್ಪಿತಸ್ಥನಂತೆ.

'ಅಲೆಗಳನ್ನು ನೋಡ್ತಾ ಮೈಮರೆಯೋ ತಾಣ ಇದಲ್ಲ ಕಿರಣ. ಮರಳು ದಿಣ್ಣೆ ಅಪಾಯದ ದಿಣ್ಣೆ. ಇಲ್ಲಿರೋವಾಗ ಅಪಾಯಗಳನ್ನು ಎದುರಿಸೋ ಶಕ್ತಿಯೂ ಇರಬೇಕಾಗುತ್ತೆ'

ಇನ್ಸ್‌ಪೆಕ್ಟರ್ ರಾಜಧಾನಿಯ ಮಾತಿಗೆ ಕಿರಣನ ಮುಖ ಗಂಭೀರವಾಯಿತು. ಮೇನಕಾ ಕೂಡ ತಪ್ಪಿತಸ್ಥೆಯಂತೆ ತಲೆ ತಗ್ಗಿಸಿ ನಿಂತಿದ್ದಳು.

ಇನ್ಸ್ಪೆಕ್ಟರ್ ಕಿರಣನ ಭುಜದ ಮೇಲೆ ಆತ್ಮೀಯತೆಯಿಂದ ಕೈ ಇಟ್ಟ.

'ನೀವಿಬ್ರೂ ಸಮಯ ಕಳೆಯೋದಿಕ್ಕೆ ಇಲ್ಲಿಗೆ ಬಂದಿದ್ದೀರಿ ಅನ್ಸುತ್ತೆ?' ಅಧಿಕಾರಿಯ ಪ್ರಶ್ನೆಗೆ ಕಿರಣ ತಲೆಯಲುಗಿಸಿ ಉತ್ತರಿಸಿದ.

'ಇಲ್ಲ, ಕಾಶಮ್ಮ ಮನೆ ಬಿಟ್ಟು ಹೋಗಿದ್ದಾರೆ. ಅವರನ್ನು ಹುಡುಕಿಕೊಂಡು ಇಲ್ಲಿವರೆಗೂ ಬಂದೆವು. ಇಲ್ಲಿ ಅವರ ಸುಳಿವಿಲ್ಲ'

ಕಿರಣನ ಮಾತಿಗೆ ಅಧಿಕಾರಿಯ ಹುಬ್ಬುಗಳು ಏರಿ ನಿಂತವು. ತನಗೆ ಏನೂ ಗೊತ್ತಿಲ್ಲವೆನ್ನುವಂತೆ ಅವನ ಮುಖವಿತ್ತು.

'ಯಾವತ್ತೂ ಮನೆ ಬಿಟ್ಟು ಹೊರಗೆ ಬರದ ಹೆಂಗಸು ಅವರು. ಅದು ಹೇಗೆ ಸಾಧ್ಯ?' ಮೇನಕಾಳತ್ತ ನೋಡಿ ಕುಹಕವಾಡಿದಂತಿತ್ತು ಅಧಿಕಾರಿಯ ಮಾತು. ಮೇನಕಾಳಿಗೆ ಇನ್ಸ್‌ಪೆಕ್ಟರ್‌ನ ಮಾತು ಅರ್ಥವಾಯಿತು.

'ಕ್ಷಮಿಸಿ, ಎಲ್ರೂ ನನ್ನ ತಪ್ಪಾಗಿ ತಿಳ್ಕೊಂಡಿದ್ದಾರೆ. ಇದು ನನ್ನ ಬೇಜವಾಬ್ದಾರಿಯಿಂದಲ್ಲ. ಕಾಕುಟ್ಟನ ಪ್ರೇರಣೆಯಿಂದ' ಅಧಿಕಾರಿಗೆ ಮನದಟ್ಟಾಗುವಂತೆ ತಿಳಿಸಿದಳು.

ಕಾಕುಟ್ಟನ ಹೆಸರು ಕೇಳುತ್ತಲೇ ಅಧಿಕಾರಿಯ ಮುಖ ಗಂಭೀರವಾಯಿತು.

'ಅಂದ್ರೆ, ನಿನ್ನ ಚಿಕ್ಕಮ್ಮಾ ಮನೆ ಬಿಟ್ಟು ಹೋಗಲು ಕಾಕುಟ್ಟ ಕಾರಣನೇ?'

'ಹೌದು, ಡ್ಯಾಡಿ ಜೊತೆಗೆ ಜಗಳ ಮಾಡಿ ಅವರು ಮನೆಯಿಂದ ಹೊರಗೆ ಹೋದ ಮೇಲೆ ಆಕೆ ಕಾಕುಟ್ಟನಿಗೆ ಫೋನ್ ಮಾಡಿ ಕಾರು ತರಿಸಿಕೊಂಡಿದ್ದಾಳೆ'

ಇನ್ಸ್‌ಪೆಕ್ಟರ್‌ನ ಹುಬ್ಬುಗಳು ಮತ್ತೆ ಬೆಸೆದುಕೊಂಡವು.

'ಹೇಗೆ ಕಾಕುಟ್ಟನಿಗೇ ಫೋನ್ ಮಾಡಿ ಕರೆಸಿಕೊಂಡಿದ್ದಾರೆಂತ ನಿಖರವಾಗಿ ಹೇಳ್ತೀರಿ'

## ಇಲ್ಲಿಯವರೆಗೆ

ಮುತ್ತುಚಾಂಡಿ ಮನೆಗೆ ಪಾಂಬು ಹೋಗುತ್ತಾನೆ. ದೋಣಿ ಸಮುದ್ರಕ್ಕೆ ಇಳಿಯದೆಯೇ ಬೆಳ್ಳಂಬೆಳಗ್ಗೆ ಇಷ್ಟೊಂದು ಮೀನುಗಳು ಎಲ್ಲಿಂದ ಎಂದು ಪಾಂಬುಗೆ ಅಚ್ಚರಿಯಾಗುತ್ತದೆ. ಈ ಮಧ್ಯೆ ಹಿತೇಶ ಮರಳುದಿಣ್ಣೆಯಲ್ಲಿ ಕೆಲದಿನಗಳಿಂದ ಕಾಣಿಸಿಕೊಳ್ಳದೇ ಇರುವುದನ್ನು ಗಮನಿಸಿದ ಮುತ್ತುಚಾಂಡಿ ಹಿತೇಶ ಅಪಾಯದಲ್ಲಿ ಸಿಲುಕಿದನೇ ಎಂಬ ಅನುಮಾನಕ್ಕೊಳಗಾಗುತ್ತಾನೆ. ಪಾಂಬುವಿನ ಬಳಿ ಏನಾದರೂ ಸೂಕ್ಷ್ಮ ವಿಚಾರಗಳು ಸಿಗಬಹುದೇ ಎಂದು ಇನ್ಸ್‌ಪೆಕ್ಟರ್ ರಾಜಧಾನಿ ಪಾಂಬುವನ್ನು ಕರೆಸಿಕೊಳ್ಳುತ್ತಾನೆ.